# ಸಾವಯುವ ಕೃಯು ತತ್ವಗಳು

## ಪ್ರಸ್ತಾವನೆ

ಸಾವಯುವ ಕೃ ವೃದ್ಧಿ ಹೊಂದಿ, ಅಭಿವೃದ್ಧಿಯಾಗಲು ಈ ತತ್ವಗಳು ಬೇರುಗಳಾಗಿರುತ್ತವೆ; ಜಗತ್ತಿಗೆ ಸಾವಯುವ ಕೃಯು ನೀಡುತ್ತಿರುವ ಕೊಡುಗೆಯನ್ನು ತಿಳಿಸುತ್ತವೆ. ಭೌಗೋಳಿಕ ದೃ್ಟುಂ-ಂದ ಕೃಯನ್ನೆಲ್ಲಾ ದೃ್ಟುಯಲ್ಲಿಟ್ಟುಕೊಂಡು ಸುಧಾರಿಸಲು ಇವು ನೆರವಾಗುತ್ತವೆ.

ಮಾನವನ ಮೂಲ ಕ್ರಿಯಾ ಚಟುವಟಿಕೆಗಳ ಪೈಕಿ ಕೃಯೂ ಒಂದು ಏಕೆಂದರೆ ಪ್ರತಿಯೊಬ್ಬರೂ ದಿನನಿತ್ಯದ ಪೋಷಣೆಗೆ ಕೃಯನ್ನೇ ಅವಲಂಭಿಸಿದ್ದಾರೆ. ಇತಿಹಾಸ, ಸಂಸ್ಕೃತಿ ಹಾಗೂ ಸಮುದಾಯ ಮೌಲ್ಯಗಳೆಲ್ಲವೂ ಕೃಯಲ್ಲಿ ಅಡಗಿವೆ.

ವಿಶಾಲ ದೃ್ಟುಂದ ನೋಡುವುದಾದರೆ ಕೃಗೆ ಅನುಸರಿಸುವ ತತ್ವಗಳು ಭೂಮಿಯನ್ನು ಉಳುಮೆ ಮಾಡುವುದು, ನೀರಿನ ಬಳಕೆ, ಸಸ್ಯ ಸಂಪತ್ತು ಹಾಗೂ ಪ್ರಾಣಿ ಸಂಪತ್ತುಗಳನ್ನು ಒಳಗೊಂಡಿದ್ದು ಆಹಾರ ಹಾಗೂ ಮತ್ತಿತರ ಸಾಮಗ್ರಿಗಳನ್ನು ಉತ್ಪಾದಿಸಿ, ಸಿದ್ದಗೊಳಿಸಿ ಅವುಗಳನ್ನು ಹಂಚುವಲ್ಲಿ ತೊಡಗಿಸಿಕೊಂಡಿವೆ. ಜೀವಂತ ಭೂಮಿತಾುಹೊಂದಿಗೆ ಪರಸ್ಪರ ಪ್ರತಿಕ್ರಿುಸಿ, ಒಬ್ಬನ್ನೊಬ್ಬರು ಅರ್ಥ ಮಾಡಿಕೊಂಡು ಮುಂದಿ ಪೀಳಿಗೆಗಳ ಅಭ್ಯುದಯಕ್ಕೆ ದಾರಿ ಮಾಡಿಕೊಡುವುದು ಅಗತ್ಯ.

ಸಾವಯುವ ಬೇಸಾಯದ ತತ್ವಗಳು ಅದರ ಸಂಪೂರ್ಣ ವೈವಿಧ್ಯತೆಯೊಂದಿಗೆ ಸಾವಯುವ ಕೃ ಮಾಡುವತ್ತ ಪ್ರೇರೇಪಣೆ ನೀಡುತ್ತವೆ. ಸ್ಥಾನ, ಕಾರ್ಯಕ್ರಮ ಮತ್ತು ಪ್ರಮಾಣಗಳನ್ನು ಅಭಿವೃದ್ಧಿಪಡಿಸುವಲ್ಲಿ ಈ ತತ್ವಗಳು ಮಾರ್ಗದರ್ಶನ ನೀಡುತ್ತವೆ. ಅವುಗಳ ಜೊತೆಗೆ ಅವುಗಳನ್ನು ಜಗತ್ತಿನಾದ್ಯಂತ ಅನುಸರಿಸಿ ಆಚರಣೆಗೆ ತರುವಲ್ಲಿ ಈ ತತ್ವಗಳು ನೆರವಾಗುವುವು.







## ಸಾವಯುವ ಬೇಸಾಯುವು

ಈ ಕೆಳಗಿನ ಅಂಶಗಳ ಮೇಲೆ ಆಧಾರಗೊಂಡಿರುತ್ತದೆ:

**ಆರೋಗ್ಯದ ತತ್ವ**

**ಪರಿಸರದ ತತ್ವ**

**ಸಮಾನತೆ ಅಥವಾ ನಿಸ್ವಕ್ಷಪಾತವಿರುವುದು**

**ಆರೈಕೆ ಅಥವಾ ಉಪಚಾರದ ತತ್ವ**

ಪ್ರತಿಯೊಂದು ತತ್ವವೂ ಹೇಳಿಕೆಯ ಮೂಲಕ ಹಾಗೂ ವಿವರಣೆಯೊಂದಿಗೆ ಕೂಡಿರುತ್ತದೆ. ಒಟ್ಟಾರೆ ಈ ತತ್ವಗಳು ಬಳಸಬೇಕಷ್ಟೆ. ಕ್ರಿಯಾಸಕ್ತರಾಗುವಂತೆ ಮಾಡಲು ಇವುಗಳನ್ನು ರಚಿಸಿ, ರೂಪಿಸಲಾಗಿದೆ.

# ಸಾವಯುವ ಕೃಯು ತತ್ವಗಳು

## ಆರೋಗ್ಯದ ತತ್ವ

ಸಾವಯವ ಬೇಸಾಯವು ಮಣ್ಣಿನ ಆರೋಗ್ಯವನ್ನು ಸುಧಾರಿಸಿ ಸುಸ್ಥಿರಗೊಳಿಸಬೇಕು. ಅದೇ ರೀತಿ ಸಸ್ಯಗಳ, ಪ್ರಾಣಿಸಂಕುಲಗಳ, ಮಾನವನ ಹಾಗೂ ಭೂಗ್ರಹದ ಆರೋಗ್ಯವನ್ನು ರಕ್ಷಿಸಬೇಕು. ಇವೆಲ್ಲವೂ ಒಂದು ಎಂಬ ಭಾವನೆಯನ್ನು ಮೂಡಿಸುವುದು ಅಗತ್ಯ.



ವೈಯ್ಯಕ್ತಿಕ ಹಾಗೂ ಸಮುದಾಯುಗಳ ಆರೋಗ್ಯವನ್ನು ಪ್ರಕೃತಿಂದ ಬೇರ್ಪಡಿಸಲಾಗದು ಎಂಬುದಾಗಿ ಈ ತತ್ವ ತಿಳಿಯುಪಡಿಸುತ್ತದೆ. ಅರೋಗ್ಯದಿಂದ ಕೂಡಿದ ಮಣ್ಣು, ಅರೋಗ್ಯಕರ ಬೆಳೆಗಳನ್ನು ಉತ್ಪಾದಿಸಬಲ್ಲದು. ಅದರ ಪರಿಣಾಮ ಅರೋಗ್ಯದಿಂದ ಕೂಡಿದ ಪ್ರಾಣಿ ಸಂಕುಲ ಹಾಗು ಜನತೆ.

ಸಜೀವ ಕ್ರಿಯೆಯು ಆರೋಗ್ಯ ಮತ್ತು ಕ್ರಿಯಾ ಚಟುವಟಿಕೆಗಳ ಸಂಕೇತ, ಅದರ ಅರ್ಥ ಕಾಲೆ ಅಥವಾ ರೋಗವಿಲ್ಲದಿರುವುದು ಎಂದಲ್ಲ. ಆದರೆ ಭೌತಿಕ, ಮಾನಸಿಕ, ಸಾಮಾಜಿಕ ಹಾಗೂ ಸಮುದಾಯುಗಳ ಆರೋಗ್ಯ ಸುಸ್ಥಿತಿಯಲ್ಲಿದ್ದು, ನಿಸರ್ಗವು ಕೆಡದಂತೆ ನೋಡಿಕೊಳ್ಳುವುದೇ ಎದರಲ್ಲಿ ಅಡಗಿರುವ ತತ್ವ.

ಬೇಸಾಯು (ಕೃ), ಸಂಸ್ಕರಣೆ, ಹಂಚಿಕೆ ಅಥವಾ ವಿತರಣೆ ಇಲ್ಲವೇ ಸೇವನೆರಲಿ, ಅವೆಲ್ಲವೂ ಸೂಕ್ಷ್ಮ ಜೀವಿಗಳಿಂದ ಹಿಡಿದು ಮಾನವನವರೆಗೆ ಅರೋಗ್ಯದಿಂದ ಕೂಡಿದ್ದು ಪರಿಸರಕ್ಕೆ ಯಾವುದೇ ತೆರನಾದ ಧಕ್ಕೆಯಾಗಂದಂತೆ ಮಾಡುವುದೇ ಸಾವಯುವ ಕೃಯು ಪ್ರಮುಖ ಪಾತ್ರ. ಪ್ರತ್ಯೇಕವಾಗಿ ಹೇಳುವುದಾದರೆ ಸಾವಯುವ ಕೃಯು ಶ್ರೇಷ್ಟ ಗುಣಮಟ್ಟದ ಹಾಗೂ ಪೌಷ್ಟಕವಿರುವ ಆಹಾರವನ್ನು ಉತ್ಪಾದಿಸಿ, ಆರೋಗ್ಯವನ್ನು ಸಂರಕ್ಷಿಸುವಂತಿರಬೇಕು. ಈ ದೃಯಿಂದ ರಾಸಾಯುನಿಕ ಗೊಬ್ಬರಗಳನ್ನು, ಪೀಡೆನಾಶಕಗಳನ್ನು, ಪ್ರಾಣಿಗಳ ಔಷಧಿಗಳನ್ನು ಹಾಗೂ ಆಹಾರ ಪದಾರ್ಥಗಳಿಗೆ ಸೇರಿಸುವ ಬಣ್ಣ ಮಂತಾಗಿ ನಿವಾರಿಸಿ, ಆರೋಗ್ಯ ಸುಧಾರಿಸಲು ಪ್ರಯುತ್ನಿಸಬೇಕಾಗಿದೆ.

## ಪರಿಸರದ ತತ್ವ

ಸಾವಯವ ಬೇಸಾಯವು ಜೈವಿಕ ಪರಿಸರದ ವ್ಯವಸ್ಥೆಯನ್ನವಲಂಬಿಸುತ್ತದೆ. ಅದರಲ್ಲಿ ಹಲವಾರು ವರ್ತುಲಗಳಿರುತ್ತವೆ. ಅವುಗಳೊಂದಿಗೆ ಕೆಲಸ ನಿರ್ವಹಿಸಿ, ಸುಸ್ಥಿರಗೊಳ್ಳುವಂತೆ ಮಾಡಬೇಕು.



ಈ ತತ್ವವು ಜೈವಿಕ ಪರಿಸರದೊಳಗೇ ತಳವೂರಿರುತ್ತದೆ. ಉತ್ಪಾದನೆ, ಪುನರ್ ಬಳಕೆ, ಪೋಷಣೆ ಹಾಗೂ ಯೋಗಕ್ಷೇಮಗಳು ಪರಿಸರ ಕ್ರಿಯಾ ಚಟುವಟಿಕೆಗಳ ಮೇಲೆ ಆಧಾರಗೊಂಡಿರುತ್ತವೆ. ಉದಾಹರಣೆಗೆ, ಬೆಳೆಗಳಾದರೆ ಇದು ಜೀವಂತ ಮಣ್ಣು; ಪ್ರಾಣಿಗಳಿಗೆ ಅದು ಕ್ಷೇತ್ರ (ಫಾರ್ಮ್) ಪರಿಸರ ವ್ಯವಸ್ಥೆ; ಮೀನುಗಳಿಗೆ ಹಾಗೂ ಇತರ ಜಲಚರ ಪ್ರಾಣಿಗಳಿಗೆ ಅದು ನೀರಿನ ಪರಿಸರವಾಗಿರುತ್ತದೆ.

ಸಾವಯುವ ಬೇಸಾಯು, ಹುಲ್ಲುಗಾವಲು ಮತ್ತು ಕಾಡುಗಳಿಂದ ಲಭ್ಯವಾಗುವ ಉತ್ಪನ್ನಗಳ ಕೊಯ್ಲುಗಳು ನಿಸರ್ಗದ ಅಥವಾ ಪರಿಸರದ ಸಮತೋಲತೆಯುನ್ನು ಏರುಪೇರು ಮಾಡಬಾರದು. ಈ ವರ್ತುಲಗಳು / ಪರಿಧಿ ಚಕ್ರಗಳು ಸಾರ್ವತ್ರಿಕವಿರುವಂತವು. ಜಗತ್ತಿನ ಆದ್ಯಂತ ಇರುವಂತವು. ಆದರೆ ಅವುಗಳ ಕಾರ್ಯಚರಣೆ ಮಾತ್ರ ಪ್ರದೇಶಕ್ಕೆ ನಿಗಧಿತವಿರುತ್ತದೆ. ಸಾವಯುವ ಉಸ್ತುವಾರಿ/ನಿರ್ವಹಣೆಯು ಸ್ಥಳೀಯ ಪರಿಸ್ಥಿತಿಗಳಿಗೆ ತಕ್ಕಂತಿರಬೇಕು. ಪರಿಸರ, ಸಂಸ್ಕೃತಿಗಳು ಮುಂತಾಗಿ ವ್ಯತ್ಯಾಸಗೊಳ್ಳಬಾರದು. ತೊಡಗಿಸುವ ಸಾಮಗ್ರಿಗಳು ಪುನರ್ ಬಳಕೆಯಾಗುವ ರೀತಿ ಕ್ಷೀಣಗೊಳ್ಳಬೇಕು. ಅವು ಪುನರಾರ್ವತನೆ ಹೊಂದಿ ಹೆಚ್ಚಿನ ಅಥವಾ ಸಮರ್ಥವಿರಬೇಕು. ನಿಸರ್ಗದ ಗುಣಮಟ್ಟ ಸುಧಾರಿಸುವುದರ ಜೊತೆಗೆ ಸಂಪನ್ಮೂಲಗಳು ಸಂರಕ್ಷಣೆಯಾಗುವುದು ಬಹು ಅಗತ್ಯ. ಸಾವಯುವ ಬೇಸಾಯುವು ಪರಿಸರದ ಸಮತೋಲತೆಯುನ್ನು ಕಾಪಾಡುವಂತಿರಬೇಕು, ಅದನ್ನು ಬೇಸಾಯು ಪದ್ಧತಿಗಳು ಅಗತ್ಯವಿರುವ ಸ್ವಭಾವ, ತಳಿ ಸಂಬಂಧಿತ ಮತ್ತು ಕೃ ವೈವಿಧ್ಯತೆಗಳನ್ನು ಸ್ಥಿರೀಕರಿಸುವುದು ಮುಂತಾಗಿ ಸೇರಿರುತ್ತವೆ.

ಸಾವಯುವ ಉತ್ಪನ್ನಗಳನ್ನು ಯಾರು ಉತ್ಪಾದಿಸುವರೋ, ಸಂಸ್ಕರಿಸುವರೋ, ಮಾರಾಟ ಮಾಡುವರೋ ಹಾಗೂ ಸೇವಿಸುವ ಗ್ರಾಹಕರು ಸಾಮಾನ್ಯ ಪ್ರಾಕೃತಿಕ ಅಂಶಗಳನ್ನು ಕಾಪಾಡಿ ಅಥವಾ ರಕ್ಷಿಸಬೇಕು. ಈ ಅಂಶಗಳಲ್ಲಿ ಭೂ ಮೇಲ್ಮೈ ಹವಾಗುಣ, ಸ್ವಭಾವ, ಜೈವಿಕ ವೈವಿಧ್ಯತೆ, ಗಾಳಿ ಮತ್ತು ನೀರು ಸೇರಿರುತ್ತವೆ.

# ಸಮಾನತೆಯ ತತ್ವ

ಸಾವಯವ ಕೃಷಿಯು ಸಾಮಾನ್ಯ ಪರಿಸರ ಹಾಗೂ ಜೈವಿಕ ಅವಕಾಶಗಳನ್ನು ಸಮಾನತೆಯ ಆಧಾರದ ಮೇಲೆ ಹೊಂದಿದ್ದು ನಿರ್ಮಾಣಗೊಂಡಿರಬೇಕು.



ಸಮಾನತೆಯೇನಿದ್ದರೂ, ಪರಸ್ಪರ ಗೌರವ, ನ್ಯಾಯ ಮುಂತಾಗಿ ಸಾರ್ವತ್ರಿಕವಾಗಿ ಸಿಗುವಂತೆ ಮಾಡಿದರೆ ಯಾವುದೇ ಅನ್ಯಾಯ ಇರಲಾರದು. ಭೂಮಿಯ ಮೇಲಿನ ಸಸ್ಯ, ಪ್ರಾಣಿ ಹಾಗೂ ಜೀವ ಕೋಟಿಗಳೊಂದಿಗೆ ಮಾನವನು ಸಹಬಾಳ್ವೆ ಹಾಗೂ ಸಮ ಹಂಚಿಕೆಗಳನ್ನು ಹೊಂದಿದ್ದರೆ ಯಾವ ಪಕ್ಷಪಾತವೂ ಇರುವುದಿಲ್ಲ. ಇವೆಲ್ಲವುಗಳೊಂದಿಗೆ ಸಮಾನವಾಗಿ ಹೊಂದಿಕೊಂಡು ಬಾಳಬೇಕಾಗುತ್ತದೆ.


ಈ ತತ್ವವು ಒತ್ತಿ ಹೇಳುವುದೇನೆಂದರೆ ಸಾವಯವ ಬೇಸಾಯವು ರೈತರು, ಕಾರ್ಮಿಕರು, ಸಂಸ್ಕರಣೇದಾರರು, ಹಚಿಚಿಕೆದಾರರು (ವಿತರಕರು), ವ್ಯಾಪರಿಗಳು ಮತ್ತು ಗ್ರಾಹಕರು ಸೇರಿದಂತೆ ಈ ಎಲ್ಲಾ ವರ್ಗಗಳೊಂದಿಗೆ, ಎಲ್ಲಾ ಹಂತಗಳ್ಲಿ ಹಾಗೂ ಸೌಹಾರ್ದಯುತ ಒಳ್ಳೆಯ ಸಂಬಂಧ–ಸಂಪರ್ಕಗಳನ್ನು ಹೊಂದಿರಬೇಕು ಎಂಬುದಾಗಿ. ಉತ್ತಮ ಗುಣಮಟ್ಟದ ಜೀವನದಲ್ಲಿ ತೊಡಗಿರುವವರೆಲ್ಲರಿಗೂ ಸಾವಯವ ಬೇಸಾಯವು ಆಹಾರದ ಸಾರ್ವಭೌಮತ್ವವನ್ನು ಹೊಂದಿದ್ದು ಬಡತನ ನಿರ್ಮೂಲನೆಯಲ್ಲಿ ಶ್ರಮಿಸಬೇಕು. ಉತ್ತಮ ಗುಣಮಟ್ಟದ ಹಾಗೂ ಪೌಷ್ಠಿಕವಿರುವ ಆಹಾರವನ್ನು ಹಾಗೂ ಇತರ ಅಗತ್ಯ ವಸ್ತುಗಳನ್ನು ಉತ್ಪಾದಿಸುವುದು ಇದರಲ್ಲಿ ಅಡಗಿರುವ ಬಹುಮುಖ್ಯ ಅಂಶ.

ಪ್ರಾಣಿ ಸಂಕುಲವು ಆಯಾ ಪ್ರಾಣಿಯ ನೈಜ ಪರಿಸ್ಥಿತಿ, ಪ್ರಾಕೃತಿಕ ಜೀವನ ಪರಿಸರಗಳನ್ನು ಹೊಂದುಂತಿರಬೇಕು. ಅದರಿಂದ ಅವುಗಳ ಶಾರೀರಿಕ ಸ್ಥಿತಿ, ನೈಜ ವರ್ತನೆ ಮತ್ತು ಅರೋಗ್ಯಗಳು ಚೆನ್ನಾಗಿರುತ್ತವೆ.

ಉತ್ಪಾದನೆಗೆ ಮತ್ತು ಸೇವನೆಗೆ ಬಳಸಲ್ಪಡುವ ನೈಸರ್ಗಿಕ ಹಾಗೂ ಪ್ರಾಕೃತಿಕ ಸಂಪನ್ಮೂಲಗಳು ಹೇಗಿರಬೇಕೆಂದರೆ ಸಾಮಾಜಿಕವಾಗಿ ಮತ್ತು ಪರಿಸರ ಅನ್ವಯವಾಗಿದ್ದು ಮುಂದಿನ ಪೀಳಿಗೆಗಳಿಗೆ ನೆರವಾಗುವಂತಿರಬೇಕು. ಉತ್ಪಾದನೆ, ಹಂಚಿಕೆ ಮತ್ತು ವ್ಯಾಪಾರ–ವ್ಯವಹಾರಗಳು ನ್ಯಾಯ ಸಮ್ಮತವಾಗಿರಬೇಕು.

# ಆರೈಕೆ/ಶುಶ್ರೂಷೆಯ ತತ್ವ

ಸಾವಯವ ಕೃಷಿಯನ್ನು ಬಲು ಎಚ್ಚರಿಕೆಯಿಂದ ಹಾಗೂ ಜವಾಬ್ದಾರಿಯಿಂದ ಕೈಗೊಳ್ಳಬೇಕಾಗುತ್ತದೆ. ಅದರ ಉದ್ದೇಶವೆಂದರೆ ಆರೋಗ್ಯವನ್ನು ಕಾಪಾಡುವುದು ಅದರ ಜೊತೆಗೆ ಇಂದಿನ ಹಾಗೂ ಮುಂದಿನ ಪೀಳಿಗೆಗಳು ಕ್ಷೇಮವಾರುವಂತೆ ನೋಡಿಕೊಳ್ಳುವುದೂ ಸಹಸೇರಿದೆ.



ಸಾವಯವ ಬೇಸಾಯವು ಜೀವಂತವಿರುವ ಹಾಗೂ ಬದಲಾವಣೆ ಅಥವ ಮಾರ್ಪಾಟುಗಳಿಂದ ಕೂಡಿದ ವ್ಯವಸ್ಥೆಯಾಗಿದೆ. ಅದು ಆಂತರಿಕ ಹಾಗೂ ಹೊರಗಿನ ಬೇಡಿಕೆಗಳಿಗೆ ಹಾಗೂ ಪರಿಸ್ಥಿತಿಗಳಿಗೆ ಪ್ರತಿಕ್ರಿಯೆ ತೋರುವಂತಾದ್ದು. ಸಾವಯವ ಬೇಸಾಯವನ್ನು ರೂಢಿಸಿಕೊಂಡವರು ಸಾಮರ್ಥ್ಯವನ್ನೂ ವೃದ್ಧಿಪಡಿಸಿಕೊಂಡು ಉತ್ಪಾದಕತೆಯನ್ನು ಹೆಚ್ಚಿಸಬಲ್ಲದು. ಈ ಕ್ರಿಯೆಯು ಆರೋಗ್ಯ ಮತ್ತು ಯೋಗಕ್ಷೇಮಗಳನ್ನು ಅಸ್ತವ್ಯಸ್ತ ಮಾಡದಂತೆ ನೋಡಿಕೊಳ್ಳಬೇಕು. ತತ್ಪರಿಣಾಮವಾಗಿ ಹೊಸ ತಾಂತ್ರಿಕತೆಗಳನ್ನು ರೂಪಿಸುವುದರ ಜೊತೆಗೆ ಹಾಲಿ ಇರುವ ವಿಧಾನಗಳನು ಪರಿಶೀಲಿಸಬೇಕು / ಅವಲೋಕಿಸಬೇಕು. ಪರಿಸರ ಪ್ರಜ್ಞೆಯನ್ನು ಹಾಗು ಕೃಷಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ಅರ್ಧಂಬರ್ಧ ತಿಳಿದು ಆತುರವಾಗಿ ವರ್ತಿಸಬಾರದು. ಸಾವಯವ ಕೃಷಿಯಲ್ಲಿನ ನಿರ್ವಹಣೆ, ಅಭಿವೃದ್ಧಿ ಹಾಗೂ ತಾಂತ್ರಿಕತೆಗಳ ಐಚ್ಛಿಗಳನ್ನು ಎಚ್ಚರಿಕೆಯಿಂದ ಹಾಗೂ ಜವಾಬ್ದಾರಿಯಿಂದ ಅರ್ಥಮಾಡಿಕೊಂಡು ಅನುಸರಿಸುವುದೇ ಈ ತತ್ವದಲ್ಲಿನ ಸಾರಂಶ.

ಸಾವಯವ ಬೇಸಾಯವು ಆರೋಗ್ಯದಾಯಕವಿದ್ದು, ಕ್ಷೇಮದಿಂದ ಕೂಡಿದ್ದು ಪರಿಸರ ಹಾಳಾಗದಂತೆ ಇರಬೇಕು; ವಿಜ್ಞಾನವು ಅತ್ಯಗತ್ಯ. ಆದರೆ ವೈಜ್ಞಾನಿಕ ತಿಳಿವಳಿಕೆಯೊಂದೇ ಸಾಲದು. ಪ್ರಾತ್ಯಕ್ಷಿಕ ಅನುಭವ, ಕ್ರೋಢಿಕರಣಗೊಂಡ ನೈಪುಣ್ಯತೆ ಹಾಗೂ ಸಾಂಪ್ರಾದಾಯಿಕ ಮತ್ತು ದೇಶೀಯ ಜ್ಞಾನಗಳು ಸಮಂಜಸ ಪರಿಹಾರಗಳನ್ನು ಒದಗಿಸಬಲ್ಲವು. ಸಮಯ ಪರೀಕ್ಷೆಯಿಂದ ಸಾವಯವ ಕೃಷಿಯು ಗಣನೀಯ ಸಮಸ್ಯೆಗಳನ್ನು ಅಥವಾ ತೊಂದರೆಗಳನ್ನು ದೂರಗೊಳಿಸಬಹುದು. ಹಾಗೆ ಮಾಡುವಲ್ಲಿ ಸಮಂಜಸ ತಾಂತ್ರಿಕತೆಗಳನ್ನು ಅನುಸರಿಸಿ, ಸಾಧ್ಯವಿಲದವುಗಳನ್ನು ಕೈಬಿಟ್ಟು, ಮುಂದಕ್ಕೆ ಸಾಗಬೇಕು, ಅವುಗಳಲ್ಲಿ ತಳಿ ಇಂಜಿನಿಯರಿಂಗೆ ಮುಂತಾಗಿ ಸೇರಿರುತ್ತವೆ. ಹಾನಿಗೊಳಗಾಗಬಹುದಾದ ಪ್ರತಿಯೊಬ್ಬರಿಗೂ ಕೈಗೊಂಡ ತೀರ್ಪು, ಮೌಲ್ಯಗಳನ್ನು ಮತ್ತು ಅಗತ್ಯಗಳನ್ನು ಪಾರದರ್ಶಕ ವಿಧಾನದಲ್ಲಿ ಅಥವಾ ರೂಪದಲ್ಲಿ ಮತ್ತು ಸಹಭಾಗಿತ್ವದ ಅಡಿಯಲ್ಲಿ ಮನವರಿಕೆ ಮಾಡಬೇಕು.

This document is a translation of the English document entitled "Principles of Organic Agriculture", which text was adopted by the IFOAM General assembly in Adelaide in 2005 and is the only official reference for the Principles. IFOAM does not endorse responsibility for the content of this translated version. For any doubt regarding the exact meaning of its content, please refer to the English version.





IFOAM's mission is leading, uniting and assisting the organic movement in its full diversity.

Our goal is the worldwide adoption of ecologically, socially and economically sound systems that are based on the principles of organic agriculture.

**IFOAM HEAD OFFICE**
Charles-de-Gaulle-Str. 5
53113 Bonn, Germany
Phone: +49 - 228 - 92650 - 10
Fax: +49 - 228 - 92650 - 99
Email: HeadOffice@ifoam.bio
www.ifoam.bio